ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವುದು

2604 (3366) ಶ್ರೀ ರಾಮಲಿಂಗ ರೆಡ್ಡಿ (ಜಯನಗರ) :— ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಶ್ರೀ ಜಯದೇವ ಹೃದ್ರೋಗ ಆಸ್ಪತ್ರೆಯ ಹೊಸ ಕಟ್ಟಡ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭವಾಯಿತು?

ಆ) ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಇ) ಈ ಕಟ್ಟಡವು ಪೂರ್ಣಗೊಂಡಿದೆಯೇ?

ಈ) ಈ ಹೊಸ ಆಸ್ಪತ್ರೆಯಲ್ಲಿರುವ ಹಾಸಿಗೆಗಳ ಸಂಖ್ಯೆ ಎಷ್ಟು?

ಉ) ಈ ಆಸ್ಪತ್ರೆಗೆ ಬೇಕಾಗುವ ವೈದ್ಯಕೀಯ ಉಪಕರಣಗಳ ವೆಚ್ಚವೆಷ್ಟು?

ಊ) ಸದರಿ ಆಸ್ಪತ್ರೆಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆಯೇ?

ಋ) ಆಸ್ಪತ್ರೆಯನ್ನು ಯಾವಾಗ ಕಾರ್ಯಾರಂಭ ಮಾಡಲಾಗುವುದು?

ಶ್ರೀಮತಿ ನಫೀಸ್ ಫಜಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :—

ಅ) ದಿನಾಂಕ : 4-7-1994 ರಲ್ಲಿ ಪ್ರಾರಂಭವಾಯಿತು

ಆ) ಒಟ್ಟು ರೂ.3903 ಲಕ್ಷಗಳು

ಇ) ಕಟ್ಟಡವು ಪೂರ್ಣವಾಗಿ ಮುಗಿದಿದೆ. ಈಗ ಈ ಕೆಲಸಗಳ ಪರಿವೀಕ್ಷಣೆ ಮತ್ತು ಚಾಲನೆ ಮಾಡುವ ಹಂತದಲ್ಲಿದೆ.

ಈ) ಒಟ್ಟು 519 ಹಾಸಿಗೆಗಳು

ಉ) ರೂ.26.80 ಕೋಟಿ

ಊ) ಸಿಬ್ಬಂದಿಯನ್ನು ಭರ್ತಿ ಮಾಡಲು ಆರ್ಡರ್‌ಗಳನ್ನು ಕರೆಯಲಾಗಿದೆ.

ಋ) ದಿನಾಂಕ 16-08-2001 ರಂದು ಕಾರ್ಯಾರಂಭ ಮಾಡಲು ಉದ್ದೇಶಿಸಲಾಗಿದೆ.

ರಾಜ್ಯದ ಹೆದ್ದಾರಿಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳು

2605(3367) ಶ್ರೀ ರಾಮಲಿಂಗ ರೆಡ್ಡಿ (ಜಯನಗರ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದ ಹೆದ್ದಾರಿಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳನ್ನು ಸರ್ಕಾರ ತೆರೆದಿದೆಯೆ?

ಆ. ಹಾಗಿದ್ದಲ್ಲಿ, ಎಲ್ಲೆಲ್ಲಿ ಈ ಘಟಕಗಳನ್ನು ತೆರೆಯಲಾಗಿದೆ?

ಇ ಇಲ್ಲದಿದ್ದಲ್ಲಿ ಯಾವಾಗ ಇಂತಹ ಘಟಕಗಳನ್ನು ಹೆದ್ದಾರಿಯಲ್ಲಿ ಪ್ರತಿ 100 ಕಿ.ಮಿ. ಅಂತರದಲ್ಲಿ ಒಂದರಂತೆ ತೆರೆಯಲಾಗುವುದು?

ಈ) ಇದಕ್ಕಾಗಿ ಸರ್ಕಾರ ಮೀಸಲಾಗಿಟ್ಟಿರುವ ಹಣವೆಷ್ಟು?

ಡಾ: ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :---

ಅ) ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯಡಿ ರಾಜ್ಯದ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬರುವ ಒಟ್ಟು 44 ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸಾ ಘಟಕಗಳನ್ನು ತೆರೆಯಲು ಉದ್ದೇಶಿಸಿದ್ದು, ಇವುಗಳಲ್ಲಿ 16 ಘಟಕಗಳ ಕಾಮಗಾರಿಯು ಪೂರ್ಣಗೊಂಡಿದೆ.

ಆ) ಪೂರ್ಣಗೊಂಡಿರುವ ತುರ್ತು ಚಿಕಿತ್ಸಾ ಘಟಕ ಕಟ್ಟಡ ಕಾಮಗಾರಿಗಳ ಪಟ್ಟಿ ಲಗತ್ತಿಸಿದೆ.

ಇ) ಉದ್ಭವಿಸುವುದಿಲ್ಲ.

ಈ) ತುರ್ತು ಚಿಕಿತ್ಸಾ ಘಟಕಗಳನ್ನು ಹಾಲಿ ಇರುವ ಆಸ್ಪತ್ರೆಯ ನವೀಕರಣ ಹಾಗೂ ವಿಸ್ತರಣೆಯ ಅಂಗವಾಗಿ ತೆಗೆದುಕೊಳ್ಳಲಾಗಿದ್ದು, ಇದರ ವೆಚ್ಚವು ಒಟ್ಟಾರೆ ಕಾಮಗಾರಿಗಳ ವೆಚ್ಚದಲ್ಲಿ ಸೇರಿರುತ್ತದೆ. ಪ್ರತಿಯೊಂದು ತುರ್ತು ಚಿಕಿತ್ಸಾ ಕೇಂದ್ರದ ಅಂದಾಜು ವಿಸ್ತೀರ್ಣವು 275 ಚ.ಮಿ. ಆಗಿದ್ದು, ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚ ರೂ. 15.00 ಲಕ್ಷಗಳಾಗಿರುತ್ತದೆ.

TRAUMA CENTRES under KHSDP

Sl. No.	Place	District	Stage of work
1.	Nelamangala	Bangalore (R)	Work completed
2.	Ramanagara	Bangalore (R)	-do-
3.	Tarikere	Chickmagalur	-do-
4.	Haveri	Haveri	-do-
5.	Channarayapatna	Hassan	-do-
6.	Doddaballapur	Bangalore (R)	-do-
7.	Nippani	Belgaum	-do-
8.	Kolar	Kolar	-do-

1	2	3	4
9.	Mandya	Mandya	-do-
10.	Tumkur	Tumkur	-do-
11.	Belgaum	Belgaum	-do-
12.	Chitradurga	Chitradurga	-do-
13.	Davangere	Chitradurga	-do-
14.	Hiriyur	Chitradurga	-do-
15.	Hubli	Dharwad	-do-
16.	Sakleshpur	Hassan	-do-
17.	Bijapur	Bijapur	Work under progress
18.	Chickmagalur	Chickmagalur	-do-
19.	Kundapura	D.K.	-do-
20.	Madikere	Kodagu	-do-
21.	Gundlupet	Mysore	-do-
22.	Kollegal	Mysore	-do-
23.	Sagar	Shinoga	Work under progress
24.	Shimoga	Shimoga	-do-
25.	Honavar	U.K.	-do-
26.	Sirsi	U.K.	-do-
27.	Hassan	Hassan	-do-
28.	Mangalore	D.K.	-do-
29.	Puttur	D.K.	-do-
30.	Karwar	U.K.	-do-
31.	Hunsur	Mysore	To be done
32.	Hungund	Bijapur	Work to be taken up
33.	Mysore	Mysore	Work to be taken up
34.	Molkalmuru	Chitradurga	-do-

TRAUMA CENTRES under KFW

Sl. No.	Place	District	Stage of work
1	Hospet	Bellary	Works under progress
2	Humnabad	Bidar	-do-
3	Shahapur	Gulbarga	-do-
4	Gangawati	Raichur	-do-
5	Lingasugur	Raichur	-do-
6	Sindhnur	Raichur	-do-
7	Raichur	Raichur	Located in Superintending Hospital (OPEC)
8	Bellary	Bellary	Work to be taken up
9	Bidar	Bidar	-do-
10	Gulbarga	Gulbarga	-do-

ದಾವಣಗೆರೆ ಡಿ.ಆರ್.ಎಂ. ಕಾಲೇಜಿಗೆ ಸ್ವಂತ ಕಟ್ಟಡ ಒದಗಿಸುವುದು

2606(2944) ಶ್ರೀ ರವೀಂದ್ರನಾಥ ಎಸ್.ವಿ. (ಮಾಯಕೊಂಡ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ತಮ್ಮ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ದಾವಣಗೆರೆಯಲ್ಲಿರುವ ಡಿ.ಆರ್.ಡಿ. ಕಾಲೇಜು ಸ್ಥಾಪನೆಯಾದದ್ದು ಯಾವಾಗ;

ಆ) ಬಾಪೂಜಿ ಶಿಕ್ಷಣ ಸಂಸ್ಥೆಗೆ ಡಿ.ಆರ್.ಎಂ. ಕಾಲೇಜು ಯಾವಾಗ ವರ್ಗಾವಣೆ ಆಯಿತು; (ವಿವರ ನೀಡುವುದು)

ಇ) ದಾವಣಗೆರೆ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡವಿದೆಯೇ?

ಈ) ಇಲ್ಲದಿದ್ದಲ್ಲಿ, ಈ ಕಾಲೇಜಿಗೆ ಸ್ವಂತ ಕಟ್ಟಡವನ್ನು ಎಂದಿನಿಂದ ನೀಡಲಾಗುವುದು; ಈ ಯೋಜನೆಯ ಪ್ರಗತಿ ಯಾವ ಹಂತದಲ್ಲಿದೆ?

ಡಾ: ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ದಾವಣಗೆರೆಯಲ್ಲಿರುವ ಡಿ.ಆರ್.ಡಿ. ಕಾಲೇಜು 1947ರಲ್ಲಿ ಸ್ಥಾಪನೆಯಾಯಿತು.

ಆ) ಬಾಪೂಜಿ ಶಿಕ್ಷಣ ಸಂಸ್ಥೆಗೆ ಡಿ.ಆರ್.ಎಂ. ಕಾಲೇಜು 1958ರಲ್ಲಿ ವರ್ಗಾವಣೆಯಾಯಿತು. 1973 ಡಿ.ಆರ್.ಎಂ. ವಿಜ್ಞಾನ ಕಾಲೇಜು ಹಾಗೂ ಡಿ.ಆರ್.ಜಿ. ಕಲಾ ಮತ್ತು ವಾಣಿಜ್ಯ ಕಾಲೇಜೆಂದು ವಿಭಜಿಸಲಾಯಿತು.